ಮುಂದಿನ ನೇಮಕಾತಿಯಲ್ಲಿ ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಆ) ಶಾಲಾ ಕಟ್ಟಡಗಳನ್ನು ಸಕ್ರಮಗೊಳಿಸುವ ಸಂಬಂಧ ಅರಣ್ಯ ಇಲಾಖೆಯೊಡನೆ ವ್ಯವಹರಿಸಲಾಗುತ್ತಿದೆ.

ಗದಗ ಜಿಲ್ಲೆ ಮುಂಡರಗಿ ವಿಧಾನ ಸಭಾ ಕ್ಷೇತ್ರದಲ್ಲಿ ಪ್ರಧಾನ ಮಂತ್ರಿಗಳ ಗ್ರಾಮೀಣ (ಸಡಕ್) ಯೋಜನೆ.

1855(1809)

ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ(ಮುಂಡರಗಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಪ್ರಧಾನ ಮಂತ್ರಿಗಳ ಗ್ರಾಮೀಣ (ಸಡಕ್) ಯೋಜನೆಯಡಿ ರಾಜ್ಯಕ್ಕೆ ಮಂಜೂರಾದ ಹಣವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

2. ಗದಗ ಜಿಲ್ಲೆ ಮುಂಡರಗಿ ವಿಧಾನ ಸಭಾ ಮತಕ್ಷೇತ್ರಕ್ಕೆ ಸಂಬಂಧಪಟ್ಟ ಗದಗ ತಾಲ್ಲೂಕಿನಲ್ಲಿ ಯಾವ ರಸ್ತೆ ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದೆ; ಮತ್ತು ಹಣವೆಷ್ಟು?

ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

1. ರೂ.100.57 ಕೋಟಿ ರಾಜ್ಯಕ್ಕೆ ಬಂದಿರುತ್ತದೆ. ಜಿಲ್ಲಾವಾರು ಬಿಡುಗಡೆಯಾಗಿರುವ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

2. ಗದಗ ತಾಲ್ಲೂಕಿನ ಮುಂಡರಗಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿಗಳ ಗ್ರಾಮ ಸಡಕ್ ಯೋಜನೆಯಡಿ ಯಾವುದೆ ಕೆಲಸ ನಿರ್ವಹಿಸಿ ಆಗಿರುವುದಿಲ್ಲ. ಮುಂಡರಗಿ ತಾಲ್ಲೂಕಿನ ಮುಂಡರಗಿ ಕ್ಷೇತ್ರದ ವ್ಯಾಪ್ತಿಯಲ್ಲಿ ಡೋಣಿ ಡಂಬಳ-ಆಲೂರು ರಸ್ತೆಯನ್ನು ಅಂದಾಜು ವೆಚ್ಚ ರೂ.86.07 ಲಕ್ಷಗಳಲ್ಲಿ ತೆಗೆದುಕೊಳ್ಳಲಾಗಿದೆ.

STATEMENT SHOWING THE DETAILS OF AMOUNT RELEASED TO ZILLA PANCHAYATS FOR THE YEAR 2000-01 UNDER PRADHANA MANTHRI GRAM SADAK YOJANA.

| Sl. No. | Name of District | Total (Rs.in lakhs) |
|---|---|---|
| 1 | Bagalkot | 314.55 |
| 2 | Bangalore (R) | 437.00 |
| 3 | Bangalore (U) | 137.00 |
| 4 | Belgaum | 520.00 |
| 5 | Bellary | 375.00 |
| 6 | Bidar | 332.00 |
| 7 | Bijapur | 243.05 |
| 8 | Chamarajanagar | 240.00 |
| 9 | Chickmagalur | 370.00 |
| 10 | Chitradurga | 275.00 |
| 11 | D.Kannada | 249.89 |
| 12 | Davangere | 327.00 |
| 13 | Dharwad | 272.20 |
| 14 | Gadag | 298.00 |
| 15 | Gulbarga | 572.00 |
| 16 | Hasan | 457.39 |

| | | |
|---|---|---|
| 17 | Haveri | 394.65 |
| 18 | Kodagu | 156.10 |
| 19 | Kolar | 586.00 |
| 20 | Koppal | 215.00 |
| 21 | Mandya | 415.00 |
| 22 | Mysore | 433.50 |
| 23 | Raichur | 270.00 |
| 24 | Shimoga | 377.65 |
| 25 | Tumkur | 542.00 |
| 26 | Udupi | 155.00 |
| 27 | U.Kannada | 591.00 |
| | Total | 9555.98 |